# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 486/2021 ಪಿ.ಡಬ್ಲ್ಯೂಃ 2

ಸಿಡಬ್ಲೂಃ 3

ಸಾಕ್ಷಿದಾರರ ಹೆಸರು : ರವಿಚಂದ್ರ

ತಂದೆಯ ಹೆಸರು : ನಾಗೇಶ ನಾಯ್ಕು

ವಯಸ್ಸು : 35 ವರ್ಷ

ಉದ್ಯೋಗ : ಅಬಕಾರಿ ವಾಹನ ಚಾಲಕ , ಅಬಕಾರಿ ಉಪ ಆಯುಕ್ತರ

ವಾಸ್ತವ್ಯ : ಕಚೇರಿ , ಕಾರವಾರ

ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 16-10-2023

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು ಮೇ 2017 ರಿಂದ ಇಲ್ಲಿಯವರೆಗೆ ವಾಹನ ಚಾಲಕನಾಗಿ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 17.12.2020 ರಂದು ನಾನು ಚಾಸಾ.1 ಮತ್ತು 2 ರವರೊಂದಿಗೆ ಇಲಾಖಾ ವಾಹನ ಸಂಖ್ಯೆಕೆ ಎ 30 ಜಿ 0495 ನೇದರ ಮೇಲೆ ಮಧ್ಯಾಹ್ನ 2.00 ಗಂಟೆಗೆ ಗಸ್ತು ತಿರುಗುತ್ತಿದ್ದಾಗ ಸುಮಾರು 2.15 ಗಂಟೆಗೆ ಚಾಸಾ.1 ರವರಿಗೆ ಮೈಂಗಿಣಿ ಗಡಿ ಭಾಗದಿಂದ ಗೋಪಶಿಟ್ಟಾ ನಾಕಾ ಕಡೆಗೆ ದ್ವಿಚಕ್ರ ವಾಹನದ ಮೇಲಾಗಿ ಅಕ್ರಮ ಗೋವಾ ಮದ್ಯ ಸಾಗಾಟವಾಗುತ್ತಿರುವ ಬಗ್ಗೆ ಮಾಹಿತಿ ಬಂದಿತು. ಸದರಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು ನಾವು ಮೈಂಗಿಣಿ ಕಡೆಗೆ ಹೋಗುತ್ತಿರುವಾಗ ಒಂದು ದ್ವಿಚಕ್ರ ವಾಹನ ಬರುತ್ತಿರುವುದು ಕಂಡು ಬಂದಿತ. ಸದರಿ ಚಾಲಕನಿಗೆ ನಾವು ವಾಹನ ನಿಲ್ಲಿಸಲು ಸೂಚಿಸಿದ್ದು , ನಮ್ಮನ್ನು ನೋಡಿ ಸುಮಾರು 45 ಮೀಟರ ಅಂತರದಲ್ಲಿ ವಾಹನವನ್ನು ನಿಲ್ಲಿಸಿ ಸದರಿಯವನು ಓಡಿಹೋಗಲು ಪ್ರಯತ್ನಿಸಿದಾಗ ನಾನು ಮತ್ತು ಚಾಸಾ.2 ಆತನನ್ನು ಹಿಡಿದುಕೊಂಡು ದ್ವಿಚಕ್ರ ವಾಹನದ ಬಳಿ ಕರೆದುಕೊಂಡು ಬಂದೆವು. ವಾಹನದ ಕಾಲಿಡುವ ಜಾಗದಲ್ಲಿ ಚೀಲವಿದ್ದು, ಚೀಲದಲ್ಲಿ ಸಾರಾಯಿ ಬಾಟಲುಗಳು ಇರುವುದು ಮೇಲ್ನೋಟಕ್ಕೆ ಕಂಡುಬಂದಿತು. ಸದರಿ ಚೀಲವನ್ನು ಪರಿಶೀಲಿಸಬೇಕಾಗಿ ಸುತ್ತಮುತ್ತ ಯಾರಾದರೂ ಜನರಿದ್ದಾರಾ ಎಂದು ನೋಡಲಾಗಿ ನಿರ್ಜನ ಪ್ರದೇಶವಾಗಿದ್ದರಿಂದ ಜನರು ಇರಲಿಲ್ಲಾ. ಆದ ಕಾರಣ ನನನ್ನು ಮತ್ತು ಚಾಸಾ.2 ರವರನ್ನು ಪಂಚರಾಗಿ ಸಹಕರಿಸಲು ಕೋರಿದಾಗ ನಾವು ಒಪ್ಪಿಕೊಂಡಿರುತ್ತೇವೆ. ಸಮಯದ ಅಭಾವ

ಇರುವುದರಿಂದ ಮತ್ತು ಸಾಕ್ಷ್ಯ ನಾಶವಾಗುವ ಸಂಭವ ಇದ್ದುದರಿಂದ ಮಾನ್ಯ ನ್ಯಾಯಾಲಯದಿಂದ ಸರ್ಚ ವಾರಂಟ ಪಡೆಯಲು ಸಮಯಾವಕಾಶ ಇಲ್ಲದಿರುವ ಕಾರಣ ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54 ರ ಅಡಿಯಲ್ಲಿ ಶೋಧನಾ ಸಮ್ಮುಚಿತ ಪತ್ರವನ್ನು ಚಾಸಾ.1 ರವರು ತಯಾರಿಸಿದರು.

3. ನಂತರ ನಮ್ಮಗಳ ಸಮಕ್ಷಮ ಚೀಲವನ್ನು ಬಿಚ್ಚಿ ನೋಡಲಾಗಿ 750 ಎಂ ಎಲ್ ನ ಮೆಕಡವಲ್ಸ ನಂ.1 ವಿಸ್ಕಿ 12 ಬಾಟಲುಗಳು ಇರುವುದು ಕಂಡು ಬಂದಿತು. ಅವುಗಳ ಮೇಲೆ for sale in Goa ಎಂದು ನಮೂದಾಗಿತ್ತು. ಅವನ ಬಳಿ ಪಾಸ್ / ಪರ್ಮಿಟ ಇದೆಯೇ ಎಂದು ವಿಚಾರಿಸಲಾಗಿ ಇಲ್ಲ ಎಂದು ನುಡಿದಿರುತ್ತಾನೆ. ದ್ವಿಚಕ್ರ ವಾಹನ ಪರಿಶೀಲಿಸಲಾಗಿ ಅದು ಕಪ್ಪು ಬಣ್ಣದ ಹೋಂಡಾ ಎಕ್ಟಿವಾ ವಾಹನ ಆಗಿರುತ್ತದೆ. ಅದರ ಸಂಖ್ಯೆ ಕೆ ಎ 30 ಎಸ್ 1920 ಆಗಿರುತ್ತದೆ. ಆತನಿಗೆ ತನ್ನ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ತನ್ನ ಹೆಸರು ವಿನೋದ ಶ್ರೀಕಾಂತ ಗೋವೇಕರ , 39 ವರ್ಷ , ಸಾಃ ಕೊಠಾರ , ಕಾರವಾರ ಎಂದು ತಿಳಿಸಿದನು. ಈ ರೀತಿ ಅಕ್ರಮ ಗೋವಾ ಮದ್ಯ ಸಾಗಾಟ ಮಾಡುವುದು ಅಪರಾಧ ಎಂದು ತಿಳಸಿ ಚಾಸಾ.ರವರು ಆರೋಪಿಯನ್ನು ದಸ್ತಗಿರಿ ಮಾಡಿರುತ್ತಾರೆ.

4. ನಂತರ ರಾಸಾಯನಿಕ ಪರೀಕ್ಷೆಗೋಸ್ಕರ ಎಲ್ಲಾ ಬಾಟಲುಗಳನ್ನು ತೆಗೆದು ಅವುಗಳ ಮೇಲೆ ಬಟ್ಟೆ ಸುತ್ತಿ, ದಾರ ಕಟ್ಟಿ ಸೀಲ್ ಮಾಡಿ ನಮ್ಮ ಸಹಿ ಇರುವ ಮಾದರಿ ಚೀಟಿ ಅಂಟಿಸಿ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 3.20 ರ ವರೆಗೆ ಬರೆದು ಮುಗಿಸಲಾಯಿತು. ನಂತರ ವಶಪಡಿಸಿಕೊಂಡ ಮು ಮಾ ಗಳು ಮತ್ತು ಆರೋಪಿಯೊಂದಿಗೆ ಠಾಣೆಗೆ ಬಂದು ಆರೋಪಿ ವಿರುದ್ಧ ಸರಕಾರದ ಪರವಾಗಿ ಚಾಸಾ.1 ರವರು ದೂರನ್ನು ದಾಖಲಿಸಿರುತ್ತಾರೆ. ಈ ಕುರಿತು ನನ್ನ ಹೇಳಿಕೆಯನ್ನು 22.02.2021 ರಂದು ಚಾಸಾ.6 ರವರಿಗೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಮತ್ತು ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ.

5. ಈಗ ನ್ಯಾಯಾಲಯದ ಮುಂದಿರುವ ನಿಪಿ.1 ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ನಿಪಿ.2 ನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳ ಮೇಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ಮು ಮಾ 1 ಬಿ ರಿಂದ ಮು ಮಾ 12 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

**6.** ಈ ಪ್ರಕರಣದ  ಫಿರ್ಯಾದಿ ಮತ್ತು ತನಿಖಾಧಿಕಾರಿ ನಮ್ಮ ಮೇಲಾಧಿಕಾರಿಗಳು ಮತ್ತು ಅವರ ನಿರ್ದೇಶನದಂತೆ ಕೆಲಸ ಮಾಡುತ್ತೇವೆ ಎಂದರೆ ಸರಿ. ನಾನು ಕೆಲಸ ಮಾಡುವುದು ಕಾರವಾರ ಅಬಕಾರಿ ಕಚೇರಿಯಲ್ಲಿ ಎಂದರೆ ಸರಿ. ನಾವು ಠಾಣೆಯನ್ನು ಬಿಟ್ಟು ಹೊರಗೆ ಬೇಕಾದರೆ ನಾವು ರಜಿಸ್ಟರನಲ್ಲಿ ನಮೂದಿಸುತ್ತೇವೆ ಎಂದರೆ ಸರಿ.  ಸದರಿ ದಿನದಂದು ಠಾಣೆಯಿಂದ ಹೊರಗೆ ಹೋಗುವಾಗ ನಾನು ರಜಿಸ್ಟರನಲ್ಲಿ ನಮೂದಿಸಿರುವುದಿಲ್ಲಾ ಎಂದರೆ ಸರಿ.  ಸದರಿ ದಿನದಂದು ನಾನು ಕರ್ತವ್ಯದಲ್ಲಿದ್ದೆ ಎಂದು ತೋರಿಸಲು ತನಿಖಾಧಿಕಾರಿಗೆ ಹಾಜರಾತಿ ಪುಸ್ತಕದ ಪ್ರತಿ ನೀಡಿರುವುದಿಲ್ಲಾ ಎಂದರೆ ಸರಿ.

7. ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಅದನ್ನು ಓದಿ ಅರ್ಥ ಮಾಡಿಕೊಂಡು ಸಹಿ ಮಾಡಬೇಕೆಂಬ ಮಾಹಿತಿ ನನಗೆ ಇದೆ ಎಂದರೆ ಸರಿ.  ನಾನು ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿ.  ದೂರು ಮತ್ತು ನನ್ನ ಹೇಳಿಕೆಯನ್ನು ಓದಿರುತ್ತೇನೆ.  ಗೋವಾ ಮದ್ಯವನ್ನು ಪರ್ಮಿಟನೊಂದಿಗೆ ಕರ್ನಾಟಕದಲ್ಲಿ ತಂದೆ ಅದು ಅಪರಾಧವಾಗುವುದಿಲ್ಲಾ ಎಂದರೆ ಸರಿ. ಪಂಚನಾಮೆಯಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಆರೋಪಿಯ ಹತ್ತಿರ ಪಾಸ / ಪರ್ಮಿಟ ಇಲ್ಲ ಎನ್ನುವುದರ ಬಗ್ಗೆ ನಮೂದಿಸಿಲ್ಲಾ ಎಂದರೆ  ಸರಿ. ಆರೋಪಿಗೆ ಪಾಸ್ ಕುರಿತು ವಿಚಾರಿಸಲಾದ ವಿಚಾರವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿ.

8. ಸಾಕ್ಷಿಗೆ ಮು ಮಾ ಗಳನ್ನು ತೋರಿಸಲಾಗಿ ಅವುಗಳ ಮೇಲೆ for sale in Goa ಎಂದು ಬರೆದಿರುವುದಿಲ್ಲಾ ಎಂದರೆ ಬಾಟಲುಗಳ ಹಿಂದೆ ಬರೆದಿದೆ.  ಸದರಿ ಮು ಮಾ ಗಳು ಕರ್ನಾಟಕ ರಾಜ್ಯದಲ್ಲಿ ತಯಾರಾದ ನಮ್ಮ ಕಚೇರಿಯಲ್ಲಿ ಇದ್ದ ಮು ಮಾ ಗಳು ಎಂದರೆ ಸರಿಯಲ್ಲ.  ಸದರಿ ಮು ಮಾ ಗಳು ಎಲ್ಲಿ ತಯಾರುತ್ತವೆ ಎನ್ನುವ ಮಾಹಿತಿಯನ್ನು ಮುಚ್ಚಲು ಚೀಟಿಯನ್ನು ಅಂಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

9. ಚಾಸಾ.1 ರವರಿಗೆ ಮಾಹಿತಿ ಬಂದ ಸಮಯದಲ್ಲಿ ನಾವು ಮಾಜಾಳಿ ಸರಕಾರಿ ಇನಜಿನೀಯರಿಂಗ ಕಾಲೇಜು ಬಳಿ ಇದ್ದೆವು.  ಮಾಜಾಳಿ ಸರಕಾರಿ ಇಂಜಿನೀಯರಿಂಗ ಕಾಲೇಜಿನಿಂದ ಮೈಂಗಿಣಿ ಕ್ರಾಸ ಸುಮಾರು 5 ಕಿಮೀ ಆಗುತ್ತದೆ.  ಮಾಜಾಳಿ ಸರಕಾರಿ ಇಂಜಿನೀಯರಿಂಗ ಕಾಲೇಜಿನಿಂದ ಮೈಂಗಿಣಿ ಕ್ರಾಸ ಗೆ ಹೋಗುವ ಮಾರ್ಗದಲ್ಲಿ ಸಿಗುವ ಜನರಿಗೆ ಪಂಚರಾಗುವಂತೆ ಕೇಳಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚರಾಗಿ ಸಹಕರಿಸುವಂತೆ ಚಾಸಾ.1 ರವರು ಲಿಖಿತ ನೋಟೀಸನ್ನು ನೀಡಿರುವುದಿಲ್ಲಾ. ದಾಳಿಯ ಪೂರ್ವದಲ್ಲಿ ಅಂಗಜಪ್ತ ಪಂಚನಾಮೆ ಪ್ರತ್ಯೇಕವಾಗಿ ಮಾಡಿರುವುದಿಲ್ಲಾ.  ಮು ಮಾ ಗಳ ಸಿರಿಯಲ ನಂಬರ ಮತ್ತು ಬ್ಯಾಚ ನಂಬರನ್ನು ಪಂಚನಾಮೆ ಮತ್ತು ಸ್ವತ್ತು ಪಟ್ಟಿಯಲ್ಲಿ ನಮೂದಿಸಿಲ್ಲಾ.   ವಾಹನವನ್ನು ಸ್ಥಳದಲ್ಲಿ ಜಪ್ತು ಪಡಿಸಿಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ.  ಆರೋಪಿಯು ಸದಾಶಿವಗಡದಲ್ಲಿ ತನ್ನ ವಾಹನವನ್ನು ನಿಲ್ಲಿಸಿದ್ದು , ಅದನ್ನು ತಂದು ಅದರ ಮೇಲೆ ಮು ಮಾ ಗಳನ್ನು ಇಟ್ಟು ಆತನ ವಿರುದ್ಧ ಸುಳ್ಳು ಪ್ರಕರಣ

ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಮಾದರಿ ಸೀಲು ಪತ್ರಕ್ಕೆ ಸಹಿ ಹಾಕಿರುವುದಿಲ್ಲಾ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲಾ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ವಾರಸುದಾರರು ಇಲ್ಲದೇ ಇರುವಂತಹ ಮು ಮಾ ಗಳನ್ನು ಬಳಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**